**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 42/2022**

**ಪಿ ಡಬ್ಲ್ಯೂಃ1**

ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 14.08.2026.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ 3 ರ ಪರ ವಕೀಲರಿಂದ.

4. ದಾವಾ ಆಸ್ತಿಗಳು ಎಷ್ಟ ಬೆಲೆಬಾಳುತ್ತವೆ ಗೊತ್ತಿಲ್ಲ. ನನ್ನ ದಾವೆಯಲ್ಲಿ ದಾವಾ ಆಸ್ತಿಯ ಬೆಲೆ ಕುರಿತು ಬರೆಸಿಲ್ಲ. ನಾನು ವಿದ್ಯಾಬ್ಯಾಸ ಮಾಡಿಲ್ಲ. ನನ್ನ ತಂದೆಗೆ 2 ಮನೆ ಮತ್ತು 1 ಪಡಜಾಗ ಇತ್ತು. ನನ್ನ ತಂದೆಯವರು ಕೆಲವು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆಂದರೆ ಗೊತ್ತಿಲ್ಲ. ನನ್ನ ಮಾರಾಟ ಮಾಡಿದ ಆಸ್ತಿಗಳಲ್ಲಿ ನನಗೆ ಹಕ್ಕು ಇರುತ್ತದೆ. ನನ್ನ ತಂದೆ ಮರಾಟ ಮಾಡಿರುವ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನನ್ನ ತಂದೆ ದಾವಾ ಆಸ್ತಿ ಪೈಕಿ 30 ಅಡಿ ಉತ್ತರ ದಕ್ಷಿಣ 12 ಅಡಿ 6 ಇಂಚು ಜಾಗವನ್ನು ಮಹಬೂಬಸಾಬ ದಾವಲಸಾಬ ಕುರಹಟ್ಟಿ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು 1986-87 ರ ಸಾಲಿನಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಸ್ವಲ್ಪ ಭಾಗದ ಸ್ವತ್ತನ್ನು ಶೆಖಪ್ಪ ನಿಂಗಪ್ಪ ಕುರಹಟ್ಟಿ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ನನ್ನ ತಂದೆ ಮಾರಾಟ ಮಾಡಿದ ಆಸ್ತಿಯಲ್ಲಿ ನನಗೆ ಹಕ್ಕು ಇದೆ ಎಂದರೆ ಸರಿಯಲ್ಲ. ನನ್ನ ತಂದೆ ಮಾರಾಟ ಮಾಡಿದ ಆಸ್ತಿಯಲ್ಲಿ ಹಕ್ಕಿದ್ದರು ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

5.ದಾವಾ ಆಸ್ತಿಯಲ್ಲಿ ಹಿಸ್ಸಾ ಕೋರಿ ದಾವೆ ಸಲ್ಲಿಸಿರುತ್ತೇನೆ. ದಾವಾ ಆಸ್ತಿಯಲ್ಲಿ ನಾವು ಮತ್ತು ಪ್ರತಿವಾದಿ 1 ರಿಂದ 3 ಇದ್ದೇವೆ. ದಾವಾ ಆಸ್ತಿಯಲ್ಲಿ ನಾವಿಬ್ಬರು ವಾಸ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ಒಂದು ಗುರುತಿನ ಚೀಟಿ ತೋರಿಸಲಾಗಿ ಅದರಲ್ಲಿರುವ ಫೋಟೊ ನೋಡಿ ಗುರುತಿಸಿದ್ದು ಅದನ್ನು ನಿಡಿಃ1 ಎಂದು ಗುರುತಿಸಲಾಯಿತು. ನಿಡಿಃ1 ರಲ್ಲಿ ಇರುವ ರತ್ನಮ್ಮ ನನಗೆ ಮಲತಾಯಿಯಾಗಬೇಕು. ಸಾಕ್ಷಿಗೆ ಒಂದು ಪಾಸ್ಬುಕ್ ತೋರಿಸಲಾಗಿ ಅದರಲ್ಲಿರುವ ಫೋಟೊ ನೋಡಿ ಗುರುತಿಸಿದ್ದು ಅದನ್ನು ನಿಡಿಃ2 ಎಂದು ಗುರುತಿಸಲಾಯಿತು. ನಿಡಿಃ2 ರಲ್ಲಿ ಇರುವ ರತ್ನಮ್ಮ ನನಗೆ ಮಲತಾಯಿಯಾಗಬೇಕು. ಸಾಕ್ಷಿಗೆ ಒಂದು ಉಳಿತಾಯ ಖಾತೆ ಪುಸ್ತಕ ತೋರಿಸಲಾಗಿ ಅದರಲ್ಲಿರುವ ಫೋಟೊ ನೋಡಿ ಗುರುತಿಸಿದ್ದು ಅದನ್ನು ನಿಡಿಃ3 ಎಂದು ಗುರುತಿಸಲಾಯಿತು. ನಿಡಿಃ3 ರಲ್ಲಿ ಇರುವ

ರತ್ನಮ್ಮ ನನಗೆ ಮಲತಾಯಿಯಾಗಬೇಕು. ನಿಡಿ1 ರಿಂದ 3 ರ ದಾಖಲಾತಿ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ದಿಃ10.09.2012 ರಲ್ಲಿರುವ ಮ್ಯುತ್ಯು ಪತ್ರದಲ್ಲಿರುವ ಪೋಟೋ ತೊರಿಸಲಾಗಿ ಅದನ್ನು ನಿಡಿ-4 ಎಂದು ಗುರುತಿಸಲಾಯಿತು.

6. ನನ್ನ ದಾವೆಯಲ್ಲಿ ಖೊಟ್ಟಿ ಮ್ಯುತ್ಯುಪತ್ರ ಮಾಡಿಕೊಡಿರುತ್ತಾರೆ ಎಂದು ಬರೆಸಿರುತ್ತೇನೆ. ಸದರಿ ಖೊಟ್ಟಿ ಮ್ಯುತ್ಯುಪತ್ರವನ್ನು ರದ್ದುಪಡಿಲು ಈ ದಾವೆಯಲ್ಲಿ ಕೋರಿಕೊಂಡಿರುತ್ತೇನೆ. ಮ್ಯುತ್ಯುಪತ್ರ ರದ್ದುಪಡಿಸಲು ಕೋರಿಕೊಂಡಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ನನ್ನ ಸಹೋದರರು ಹಾಗೂ ಮೂರುಕೋಟಿಯವರ ವಿರುದ್ಧ ಸಲ್ಲಿಸಿರುತ್ತೇನೆ. ಮೂರುಕೋಟಿಯವರು ಆಸ್ತಿ ಖರೀದಿ ಮಾಡಿರುವುದು ಸುಳ್ಳು ಎಂದು ಈ ದಾವೆ ಸಲ್ಲಿಸಿರುತ್ತೇನೆ. ಸದರಿಯವರು ಯಾವಾಗ ಖರೀದಿ ಹಿಡಿದಿರುತ್ತಾರೆ ಎಂದು ಗೊತ್ತಿಲ್ಲ. ಯಾವ ವರ್ಷ ಆಸ್ತಿ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಖರೀದಿ ಕಾಗದ ಪತ್ರವನ್ನು ನಾನು ಪಡೇದುಕೊಂಡಿಲ್ಲ.

7. ರತ್ನಮ್ಮ ಹೆಸರು ದಾವಾ ಆಸ್ತಿಯಲ್ಲಿ ದಾಖಲಾಗಿರುವುದನ್ನು ಪ್ರಶ್ನೆ ಮಾಡಿಲ್ಲ. ರತ್ನಮ್ಮ ಹೆಸರು 2000 ನೇ ಇಸ್ವಿಯಿಂದ ದಾವಾ ಆಸ್ತಿ ದಾಖಲಾತಿಗಳಲ್ಲಿ ದಾಖಲಾತಿಯಾಗಿದೆ ಎಂದರೆ ಸರಿಯಲ್ಲ. ಯಾವ ವರ್ಷ ಹೆಸರು ದಾಖಲಾಗಿರುತ್ತದೆ ಗೊತ್ತಿಲ್ಲ. ನಿಪಿಃ1 ರಿಂದ 3 ರ ರಿತ್ಯ ಸದರಿಯವರು ಕಬ್ಜಾದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ರತ್ನಮ್ಮನಿಗೆ ಆಕೆಯ ಗಂಡ ಜೀವಂತ ಇದ್ದಾಗ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ರತ್ನವ್ವ ನಿಂಗನಗೌಡ ಪಾಟೀಲ ಇವರು 3 ನೇ ಪ್ರತಿವಾದಿಗೆ 2012 ರಲ್ಲಿ ಮ್ಯುತ್ಯು ಪತ್ರ ಮಾಡಿಕೋಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮ್ಯುತ್ಯುಪತ್ರದ ಬಗ್ಗೆ ಗೊತ್ತಿದ್ದರು ಗೊತ್ತಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಪ್ರತಿವಾದಿ 7 ಮತ್ತು 8 ನೇ ವಕೀಲರಿಂದ

1. ನಾನು ಕೊಟುರದಲ್ಲಿ ಖಾಯಂ ವಾಸ ಮಾಡುತ್ತಿದ್ದೇನೆ. ನಾನು ಸುಮಾರು 45 ವರ್ಷಗಳಿಂದ ನನ್ನ ಗಂಡನ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ. 2 ನೇ ವಾದಿ ಸುಮಾರು 40 ವರ್ಷಗಳಿಂದ ತನ್ನ ಗಂಡನ ಮನೆ ಲೋಕಾಪುರದಲ್ಲಿ ವಾಸವಾಗಿದ್ದಾರೆ. ನಾವು ನಿಂಗನಗೌಡ ಪಾಟೀಲ ವಾರಸುದಾರ ಎಂದು ತೋರಿಸಲು ವಾಸ ಪ್ರಮಾಣ ಪತ್ರ

ಹಾಜರುಪಡಿಸಿಲ್ಲ. ನಾನು ವಂಶಾವಳಿ ಪತ್ರ ಹಾಜರುಪಡಿಸಿಲ್ಲ. ನಿಂಗನಗೌಡನ ಮನೆ ಸ.ನಂ 618/4 ರಲ್ಲಿ 7 ಎಕರೆ 10 ಗುಂಟೆ ಜಮೀನು ಇದೆ ಎಂದರೆ ಗೊತ್ತಿಲ್ಲ. ನಿಂಗನಗೌಡ ವ್ಯವಸಾಯಗಾರನಾಗಿದ್ದ. ನಿಂಗನಗೌಡ ತಮ್ಮ ಜಮೀನಿನಲ್ಲಿ ವ್ಯವಾಸಾಯ ಮಾಡುತ್ತಿದ್ದ ಎಂದರೆ ಸರಿ. ಸ.ನಂ 618/4 ರ ಜಮೀನನ್ನು ಅಗಸರ ಹಸನಸಾಬ ತಂದೆ ರಾಜೆಸಾಬನಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಗೊತ್ತಿಲ್ಲ. ಸ.ನಂ 618/4 ನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ವಿ.ಪಿ.ಸಿ 724 ರಲ್ಲಿ ಎಷ್ಟು ಭಾಗಗಳು ಇವೆ ಎಂದರೆ ಗೊತ್ತಿಲ್ಲ.

2. ದಾವೆ ಸಲ್ಲಿಸಿಸಲು ನಾನು ಮಾಹಿತಿ ಕೊಟ್ಟಿರುತ್ತೇನೆ. ಪ್ರತಿವಾದಿಗಳ ಪ್ರತಿವಾದಿ ಪತ್ರ ಓದಿಸಿ ತಿಳಿದುಕೊಂಡಿಲ್ಲ. ವಿ.ಪಿ.ಸಿ 724 ನ್ನು ಈಗ ಹಲವಾರು ವಿಭಾಗವಾಗಿ ಮಾಡಲಾಗಿದೆ ಎಂದರೆ ಸರಿಯಲ್ಲ. ವಿ.ಪಿ.ಸಿ 724/ಬಿ ನ್ನು ನಿಂಗನಗೌಡ ಇವರು ಅಬ್ದುಲ್ ರಜಾಕನಿಗೆ ಮಾರಾಟ ಮಾಡಿರುತ್ತಾರೇ ಎಂದರೆ ಸರಿಯಲ್ಲ. ವಿ.ಪಿ.ಸಿ 724/ಬಿ ಅಬ್ದುಲ್ ರಜಾಕನ ಹೆಸರಿನಲ್ಲಿದ್ದು ಆತನೇ ಕಬ್ಜಾದಲಿಲರುತ್ತಾರೆ ಎಂದರೆ ಗೊತ್ತಿಲ್ಲ. ವಿ.ಪಿ.ಸಿ 724/ಅ ಮುಬಾರಕಅಹ್ಮದ್ ಕುರಹಟ್ಟಿ ಇವರ ಹೆಸರಿಗೆ ದಾಖಲಾತಿಯಾರಿದೆ ಎಂದರೆ ಗೊತ್ತಿಲ್ಲ. ವಿ.ಪಿ.ಸಿ 724/ಎ ಅಬ್ದುಲ್ ರಜಾಕಸಾಬ್ ಜಕ್ಲಿ ಇವರ ಹೆಸರಿಗೆ ಇರುತ್ತದೆ ಎಂದರೆ ಗೊತ್ತಿಲ್ಲ, ವಿ.ಪಿ.ಸಿ 724/ಸಿ ಇದು ಪ್ರಕಾಶ ಪರಶುರಾಮ ಕಲಾಲ ಇವರ ಹೆಸರಿಗೆ ಇದೆ ಎಂದರೆ ಗೊತ್ತಿಲ್ಲ. ವಿ.ಪಿ.ಸಿ 724/ಡಿ ಎಲ್ಲಮ್ಮ ತಂದೆ ಕಲ್ಲಪ್ಪ ಮೂರುಕೊಟಿ ಇವರ ಹೆಸರಿಗೆ ಇದೆ ಎಂದರೆ ಗೊತ್ತಿಲ್ಲ. ವಿ.ಪಿ.ಸಿ 724/ಇ ಪ್ರತಿವಾದಿ 7 ಮತ್ತು 8 ರವರ ಹೆಸರಿಗೆ ಇದೆ ಎಂದರೆ ಗೊತ್ತಿಲ್ಲ. ವಿ.ಪಿ.ಸಿ 724/ ಎಫ್ ಹೈದರಾಲ್ಲಿ ಜಕ್ಲಿ ಹಾಗೂ ಆತನ ಸಹೋದರ ಹಸರ್ಖಾನಿ ಮತ್ತು ಇಸ್ಮಾಯಿಲ್ ಹೆಸರಿಗೆ ಇರುತ್ತದೆ ಎಂದರೆ ಗೊತ್ತಿಲ್ಲ. ವಿ.ಪಿ.ಸಿ 724/2 ಇದು 2 ನೇ ಪ್ರತಿವಾದಿ ಹೆಸರಿಗೆ ಇದೆ ಎಂದರೆ ಗೊತ್ತಿಲ್ಲ. ಸದರಿ ಮೇಲೆ ಹೆಳಿದ ವ್ಯಕ್ತಿಗಳು ದಾವಾ ಆಸ್ತಿಯಲ್ಲಿ ದಬ್ಜಾದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎಲ್ಲಾ ವ್ಯಕ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ.

3. ನಿಂಗನಗೌಡ ಯಾವಾಗ ಮರಣ ಹೊಂದಿರುತ್ತಾರೆ ಗೊತ್ತಿಲ್ಲ. ನಿಂಗನಗೌಡನ ಮರಣ ಉತಾರ ಹಾಜರುಪಡಿಸಿಲ್ಲ. ನಿಂಗನಗೌಡ ವಂಶಾವಳಿ ಹಾಜರುಪಡಿಸಿಲ್ಲ. ಗೌರವ್ವ ಯಾವಾಗ ಮರಣ ಹೊಂದಿರುತ್ತಾರೆ ಗೊತ್ತಿಲ್ಲ. ಗೌರವ್ವನ ಮರಣ ಉತಾರ ಹಾಜರುಪಡಿಸಿಲ್ಲ. ಗೌರವ್ವನ ವಂಶಾವಳಿ ಹಾಜರುಪಡಿಸಿಲ್ಲ. ನಿಂಗನಗೌಡನ ಹೆಂಡತಿ



ಹೆಸರು ರತ್ನವ್ವ ಎಂದರೆ ಸಾಕ್ಷಿ ಮಲತಾಯಿ ಎಂದು ನುಡಿಯುತ್ತಾರೆ. ರತ್ನವ್ವ ನಿಂಗನಗೌಡನ

ಹೆಂಡತಿ ಎಂದರೆ ಸಾಕ್ಷಿ 2 ನೇ ಹೆಂಡತಿ ಎಂದು ನುಡಿಯುತ್ತಾರೆ. ರತ್ನವ್ವನಿಗೆ ನಿಂಗನಗೌಡ ವಿಪಿಸಿ 724 ರಲ್ಲಿಯ ಸ್ವಲ್ಪ ಭಾಗವನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಿಪಿಸಿ 724 ಇದು ನಿಂಗನಗೌಡನ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ವಿಪಿಸಿ 724 ಇದು ನಿಂಗನಗೌಡನ ಪಿತ್ರಾರ್ಜಿತ ಆಸ್ತಿ ಎಂದ ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲಲ. ರತ್ನಮ್ಮನಿಗೆ ಬಿಟ್ಟು ಕೊಟ್ಟ ಆಸ್ತಿಯನ್ನು 724/ಇ ಎಂದು ದಾಖಲಾತಿ ಮಾಡಲಾಗಿದೇ ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ಇ ಸ್ವತ್ತು ಆಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂದಪಟ್ಟ ಇ ಸ್ವತ್ತು ಇರುವುದಿಲ್ಲ. ವಿಪಿಸಿ 724/ಇ ಗೆ ಸಂಬಂದಪಟ್ಟಂತೆ ರತ್ನಮ್ಮ ಮಾಲೀಕಳು ಎಂದರೆ ಸರಿಯಲ್ಲ.

4.ರತ್ನಮ್ಮಳಿಗೆ 3 ನೇ ಪ್ರತಿವಾದಿ ಒಬ್ಬಳೆ ಮಗಳಿರುತ್ತಾಳೆ ಎಂದರೆ ಸರಿ. ರತ್ನಮ್ಮ ತನ್ನ ಸ್ವಂತ ಆಸ್ತಿಯನ್ನು 3 ನೇ ಪ್ರತಿವಾದಿಗೆ ಪ್ರಿತಿಯಿಂದ ಮ್ಯುತ್ಯುಪತ್ರ ಬರೆದುಕೊಟ್ಟಿರುತ್ತಾಳೇ ಎಂದರೆ ಸರಿಯಲ್ಲ, ಸದರಿ ಮ್ಯುತ್ಯು ಪತ್ರವನ್ನು ನೊಂದಾಯಿಸಿರುತ್ತಾರೆ ಎಂದರೆ ಸರಿಯಲಲ. ಮ್ಯುತ್ಯು ಪತ್ರ ರದ್ದು ಕೊರೀಲ್ಲ ಎಂದರೆ ಸರಿಯಲ್ಲ. ರತ್ನಮ್ಮ ದಿಃ 27.10.2015 ರಂದು ತೀರಿಕೊಂಡಿರುತ್ತಾಳೆ ಎಂದರೆ ಸರಿ. ರತ್ನಮ್ಮ ತೀರಿಕೊಳ್ಳುವ ಪೂರ್ವದಲ್ಲಿ ವಿಪಿಸಿ 724/ಇ ನ್ನು ತಾನೇ ಸ್ವದತ ಮಾಲ್ಕಿಯಲ್ಲಿದ್ದಳು ಎಂದರೆ ಸರಿಯಲ್ಲ. ರತ್ನಮ್ಮ ತೀರಿಕೂಂಡ ನಂತರ ಮ್ರುತ್ಯು ಪತ್ರದ ಆಧಾರದ ಮೇಲೆ 3 ನೇ ಪ್ರತಿವಾದಿು ಹೆಸರಿಗೆ ವಿಪಿಸಿ 724/ಇ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ರತ್ನಮ್ಮ ಹಾಗೂ 3 ನೇ ಪ್ರತಿವಾದಿ ಹೆಸರು ದಾಖಲಾಗಿರುದನ್ನು ನಾನು ಎಲ್ಲೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ವಿಪಿಸಿ 724/ಇಕ್ಕೆ ಸಂಪೂರ್ಣ ಮಾಲಿಕಳಾಗಿರುತ್ತಾಳೆ ಎಂದರೆ ಸರಿಯಲ್ಲ.

5. 3 ನೇ ಪ್ರತಿವಾದಿ ಕುಟುಂಬದ ಅಡಚನೆ ಸಲುವಾಗಿ ಸದರಿ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ 7 ಮತ್ತು 8 ರವರು 3 ನೇ ಪ್ರತಿವಾದಿಯಂದ ರೂ. 1,50,000 ಕ್ಕೆ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಯೊೀಗ್ಯ ಬೇಲೆ ಕೊಟ್ಟು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಕಾಗದವನ್ನು ನಾನು ರದು ಕೊರಿಲ್ಲ ಎಂದರೆ ಸರಿಯಲ್ಲ. ಖರೀದಿ ಕಾಗದ ಆದಾರದ ಮೇಲೆ 7 ಮತ್ತು 8 ನೇ ಪ್ರತಿವಾದಿ ಹೆಸರು ಪಂಚಾಯತಿಯಲ್ಲಿ ದಾಖಲಾಗಿದೆ ಎಂದರೆ ಸರಿಯಲ್ಲ.

6. ನಿಪಿ:3 ರಲ್ಲಿ  ರತ್ನಮ್ಮನ ಹೆಸರು ಕಡಿಮೆ ಮಾಡಿ 3 ನೇ ಪ್ರತಿವಾದಿ ಹೆಸರನ್ನು ಸೇರಿಸಲಾಗಿದೆ ಎಂದರೆ ಸರಿಯಲ್ಲ. ನಾನು ಉದ್ದೇಶ ಪೂರ್ವಕವಾಗಿ 7 ಮತ್ತು 8 ನೇ ಪ್ರತಿವಾದಿಯ ಹೆಸರಿಗಿರುವ ಕಾಗದವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಂಗನಗೌಡ ಮರಣ ಹೊಂದಿ ಸಮಾರು 30 ವರ್ಷಗಳಾಗಿರಬಹುದು. ನಿಂಗನಗೌಡ ಮರಣ ಹೋಂದಿದ ನಂತರ ವಾರಸಾ ನಾತೆಗೆ ನಾವು ಅರ್ಜಿ ಸಲ್ಲಿಸಿರುವುದಿಲ್ಲ. ಪ್ರತಿವಾದಿ 7 ಮತ್ತು 8 ರವರು ಪ್ರಾಮಾಣಿಕ ಖರೀದಿದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ಮ್ರುತ್ಯುಪತ್ರದ ನಕಲು ಹಾಗೂ ಖರೀದಿ ಪತ್ರದ ನಕಲನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 7 ಮತ್ತು 8 ರವರು ಖರೀದಿ ದಿನದಿಂದ ವಿಪಿಸಿ 724/ಇ ದಲ್ಲಿ  ಮಾಲೀಕರಾಗಿ ಕಬ್ಜಾದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಸಾಮೂಹಿಕ ಕಬ್ಜಾದಲ್ಲಿ ಇದ್ದೆವೆಂದು ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ವಿಪಿಸಿ 724 ಈಗ ಉಪ ವಿಭಾಗಗಳಾಗಿ ಮಾರ್ಪಾಡು ಮಾಡಿದ ಕಾರಣ ಅಸ್ತಿದಲ್ಲಿ ಇಲ್ಲ ಎಂದರೆ ಸರಿಯಲ್ಲ. ರತ್ನಮ್ಮ ಖೊಟ್ಟಿ ಮ್ರುತ್ಯು ಪತ್ರ ಬರೆದಿದ್ದಾಳೆಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 7 ಮತ್ತು 8 ಖರೀದಿ ಮಾಡಿದ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ.  ಖೊಟ್ಟಿ ಖರೀದಿ ಕಾಗದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 7 ಮತ್ತು 8 ರವರ ಆಸ್ತಿ ಲಪಟಾಯಿಸಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ವಾದಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೆಳಲು ತೊಂದರೆ ಇಲ್ಲ ಎಂದರೆ ಸರಿ. ನಿಂಗನಗೌಡ ಜೀವಂತ ಇದ್ದಾಗ ಬೇರೆ ಬೇರೆ ವ್ಯಕ್ತಿಗಳಿಗೆ ಆಸ್ತಿ ಮಾರಾಟ ಮಾಡಿರುವುದು ಗೊತ್ತಿದ್ದರು ಅವುಗಳನ್ನು ದಾವೆಯಲ್ಲಿ ಸೆರಿಸಿ ಖರೀದಿ ಕಾಗದ ರದ್ದು ಕೋರಿರುವುದಿಲ್ಲ  ಎಂದರೆ ಗೊತ್ತಿಲ್ಲ.  ದಾವಾ ಆಸ್ತಿ ವಿಪಿಸಿ 724/ಇ ದಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರು ವಿಚಾರಣೆ ಇರುವುದಿಲ್ಲ .)

<u>(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)</u>

ಓ ಹೇ ಕೆ ಸರಿ ಇದೆ.

Sd/-

ದಿವಾಣಿ ನ್ಯಾಯಾಧೀಶರು ಹಾಗೂ  ಪ್ರ.ದ.ನ್ಯಾ. ದಂ.ಗಳು

ಕುಂದಗೋಳ.